**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ಹಿರಿಯೂರು.**

**ಸಿ.ಸಿ ಸಂಖ್ಯೆಃ**2824/2020

| | | | |
|---|---|---|---|
| ಸಾಕ್ಷಿದಾರರ ಹೆಸರು | – | ವಿವೇಕ್ | ಸಿಡಬ್ಲ್ಯೂ-10 |
| ತಂದೆಯ/ಗಂಡನ ಹೆಸರು | – | ಲೇಟ್.ಪಿ.ಮರಡಿ ರಂಗಪ್ಪ | ಪಿಡಬ್ಲ್ಯೂ-5 |
| ವಯಸ್ಸು | – | 39 ವರ್ಷ | ಪ್ರ.ವ.ಬೋ ದಿನಾಂಕಃ05.07.2024 |
| ಉದ್ಯೋಗ | – | ಪಿ ಡಿ ಓ, ಹರಿಯಬ್ಬೆ ಗ್ರಾಮ ಪಂಚಾಯಿತಿ. | |
| ವಾಸ | – | ಹಿರಿಯೂರು. | |

**ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ. ಯವರಿಂದಃ-**

2018 ಅಕ್ಟೋಬರ್ ನಿಂದ 2023 ಅಕ್ಟೋಬರ್ ವರೆಗೆ ಪಿ.ಡಿ.ಓ., ಆಗಿ ಪಿ ಡಿ ಕೋಟೆ ಗ್ರಾಮ ಪಂಚಾಯಿತಿಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಅಬ್ಬಿನಹೊಳೆ ಪೋಲಿಸರು ಪರಶುರಾಮದೇವರ ಕೋಟೆ ಗ್ರಾಮದ ಸಿ.ರಂಗನಾಥ ಬಿನ್ ಚಂದ್ರಪ್ಪ ಅವರ ಮನೆಯ ಖಾತಾ Extract ನ್ನು ಕೊಡುವಂತೆ ಮನವಿ ಮಾಡಿಕೊಂಡ ಮೇರೆಗೆ ನಾನು ಖಾತಾ Extract ನ್ನು ನೀಡಿರುತ್ತೇನೆ .ಸಾಕ್ಷಿಯು ನೋಡಿ ಗುರುತಿಸಿದ ಖಾತಾ Extract ನ್ನು **ನಿಪಿ-8** ಎಂದು ಅದರಲ್ಲಿನ ಸಾಕ್ಷಿಯ ಸಹಿಯನ್ನು **ನಿಪಿ-8(ಎ)** ಎಂದು ಗುರುತಿಸಲಾಯಿತು.

**ಪಾಟೀ-ಸವಾಲುಃ ಆರೋಪಿ ಪರ ಶ್ರೀಮತಿ.ಹೆಚ್ ಬಿ ಆರ್ ವಕೀಲರಿಂದ.**

ನನಗೆ ಪೋಲಿಸರು ನೀಡಿರುವ ಲಿಖಿತ ನೋಟಿಸ್ ನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಸಿ.ರಂಗನಾಥ ಬಿನ್ ಚಂದ್ರಪ್ಪ ಅವರ ಮನೆಯಲ್ಲಿ ಕಳ್ಳತನ ಆಗಿದ್ದು ಖಾತಾ Extract ನ್ನು ಕೊಡುವಂತೆ ಪೋಲಿಸರು ಮನವಿ ಮಾಡಿಕೊಂಡಿರುತ್ತಾರೆ. ನಾನು ನಿಪಿ-8 ನ್ನು ನೀಡುವ ಮೊದಲು ಸ್ಥಳ ಪರಿಶೀಲನೆ ಮಾಡಿರುವುದಿಲ್ಲ. ಇ-ಖಾತೆಯನ್ನು ತೆಗೆಯಲು ಮಾಲೀಕರು ಹೆಬ್ಬೆಟ್ಟಿನ ಗುರುತಿನ

ಅವಶ್ಯಕತೆ ಇರುತ್ತದೆ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಸದರಿ ರಂಗನಾಥ್ ಅವರು ಸದರಿ ಇ-ಖಾತೆ ಕೊಡುವಂತೆ ಕೇಳಿಕೊಂಡಿರುವುದಿಲ್ಲ. ಪೋಲಿಸರ ಹೇಳಿಕೆ ಮೇರೆಗೆ ಇ-ಖಾತೆಯನ್ನು ನೀಡಿರುತ್ತೇನೆ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸರಿ ಇದೆ

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ., ಹಿರಿಯೂರು.